# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 81 (887) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರು ಹೆಚ್ ವಿಶ್ವನಾಥ್ (ನಾಮ ನಿರ್ದೇಶಿತರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 16.12.2024 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ನ್ನು ತಿದ್ದುಪಡಿ ಮಾಡಲಾಗಿದೆಯೆ? ಕನ್ನಡ ಪುಸ್ತಕಗಳ ಖರೀದಿಗೆ ಮೀಸಲಿರಿಸಿರುವ ಅನುದಾನ ಮತ್ತು ವೆಚ್ಚವಾದ ಮೊತ್ತ ಹಾಗೂ ಬಾಕಿ ಮೊತ್ತ ಎಷ್ಟು ಮತ್ತು ಕೈಗೊಂಡ ಕ್ರಮಗಳೇನು? ಗ್ರಂಥಾಲಯದಲ್ಲಿ ಆಯುಕ್ತಾಲಯ ಸೃಜನೆ ಕಾಯ್ದೆಯಲ್ಲಿ ಇದೆಯೇ? ಹಾಗಿದ್ದಲ್ಲಿ ದಾಖಲೆ ಒದಗಿಸುವುದು. | ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ನ್ನು ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>2024-25ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಪುಸ್ತಕಗಳ ಖರೀದಿಗೆ ಮೀಸಲಿರಿಸಿರುವ ರೂ. 856.73 ಲಕ್ಷಗಳ ಅನುದಾನದ ಪೈಕಿ ರೂ. 642.54 ಲಕ್ಷಗಳ ಅನುದಾನವನ್ನು 2023-24ನೇ ಸಾಲಿನಲ್ಲಿ ಖರೀದಿಸಿದ ಪುಸ್ತಕಗಳ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳಿಗೆ ಪಾವತಿಸಲು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.<br><br>ಹಿಂದಿನ ನಿರ್ದೇಶಕರ ಮೇಲೆ ಲೈಂಗಿಕ ದೌರ್ಜನ್ಯ ಕುರಿತು ಬಂದ ದೂರಿನನ್ವಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ನೀಡಿರುವ ವರದಿಯನ್ವಯ, ಸದರಿಯವರ ಮೇಲಿನ ಗಂಭೀರ ಸ್ವರೂಪದ ಆರೋಪಗಳು ದೃಢಪಟ್ಟಿರುವ ಹಿನ್ನೆಲೆಯಲ್ಲಿ, ನೋಟೀಸ್ ನೀಡಲಾಗಿದ್ದು, ಇದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪ್ರಕರಣಗಳನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ತಡಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದ್ದು, ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.<br><br>ಮುಂದುವರೆದು, ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಪುಸ್ತಕಗಳ ಖರೀದಿ, ಗ್ರಂಥಾಲಯ ಡಿಜಿಟಲೀಕರಣ ಪ್ರಕ್ರಿಯೆಯಲ್ಲಿ ಹಣ ದುರ್ಬಳಕೆ, ಅವ್ಯವಹಾರ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಪಿ 114 ಎಲ್‌ಐಬಿ 2023, ದಿನಾಂಕ: 11.03.2024ರಲ್ಲಿ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರನ್ನು ಸೇವೆಯಿಂದ ಅಮಾನತ್ತು ಗೊಳಿಸಲಾಗಿರುತ್ತದೆ. |

| | | |
|---|---|---|
| | | ಏತನ್ಮಧ್ಯೆ, ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ ವೆಬ್ ಪೋರ್ಟಲ್‌ಗಳಲ್ಲಿನ ಸಮಗ್ರ ಲೋಪದೋಷಗಳ ಕುರಿತು ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ ಪ್ರಥಮ ಮತ್ತು ದ್ವಿತೀಯ ಹಂತದ ಯೋಜನೆಗಳಿಗೆ ಸಂಬಂಧಿಸಿದಂತೆ, ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ರ ಟೆಂಡರ್ ನಿಯಮಗಳ ಉಲ್ಲಂಘನೆಯಾಗಿರುತ್ತದೆ ಹಾಗೂ ಯೋಜನೆಯನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವ ಬದಲು ಟೆಂಡರ್‌ದಾರರಿಗೆ ಅನುಕೂಲ ಮಾಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿಯೂ ಸಹ ಹಿಂದಿನ ನಿರ್ದೇಶಕರ ಪಾತ್ರವಿರುವುದು ಸ್ಪಷ್ಟವಾಗಿರುತ್ತದೆ.<br><br>ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಾರ್ಯವ್ಯಾಪ್ತಿಯು ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದ್ದು, ಪ್ರಸ್ತುತ ಇರುವ ನಿರ್ದೇಶಕರ ಹಂತದ ಹುದ್ದೆಯು ತಾಂತ್ರಿಕ ಸ್ವರೂಪದ ಹುದ್ದೆಯಾಗಿರುವ ಹಿನ್ನೆಲೆಯಲ್ಲಿ ಆಡಳಿತ ನಿರ್ವಹಣೆ ಕಷ್ಟಕರವಾಗಿದ್ದು, ಸದರಿ ಇಲಾಖೆಯ ಕಾರ್ಯಚಟುವಟಿಕೆಗಳ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಹಾಗೂ ಇಲಾಖೆ ಮತ್ತು ಸರ್ಕಾರದ ಹಂತದಲ್ಲಿ ಸಮನ್ವಯ ಸಾಧಿಸಿ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆ ವೃದ್ಧಿಸುವ, ಆಡಳಿತಾತ್ಮಕ ಪ್ರಕಾರ್ಯಗಳನ್ನು ಸುಗಮವಾಗಿ ನಿರ್ವಹಿಸುವ ಮತ್ತು ಸರ್ಕಾರದ ಯೋಜನೆಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ನಿರ್ದೇಶಕರ ಹುದ್ದೆಯ ಮೇಲಿನ ಹಂತದಲ್ಲಿ ಭಾ.ಆ.ಸೇ ವೃಂದದ ಆಯುಕ್ತರ ಹುದ್ದೆಯನ್ನು ಸೃಜನೆ ಮಾಡುವುದು ಯಥೋಚಿತವೆಂದು ತೀರ್ಮಾನಿಸಿ, ಸರ್ಕಾರದ ಆದೇಶ ಸಂ: ಇಪಿ 32 ಎಲ್‌ಐಬಿ 2024, ದಿನಾಂಕ: 29-06-2024 ರಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಆಯುಕ್ತರ ಹುದ್ದೆಯನ್ನು ಸೃಜಿಸಲಾಗಿದೆ. |

| | | |
|---|---|---|
| | | ಗ್ರಂಥಾಲಯ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಕ್ರಮಬದ್ಧಗೊಳಿಸುವ (Streamlining) ಹಾಗೂ ಹಿಂದಿನ ತಪ್ಪುಗಳು ಮರುಕಳಿಸದಂತೆ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನೂ ಸಹ ಆಯುಕ್ತರಿಗೆ ವಹಿಸಲಾಗಿದೆ.<br><br>ಅದರನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಒಂದು ನಿರ್ದೇಶಕ ಹುದ್ದೆಯ ಜೊತೆಗೆ ಹೊಸದಾಗಿ ಭಾರತೀಯ ಆಡಳಿತ ಸೇವೆ ವೃಂದದ ಆಯುಕ್ತರ ಹುದ್ದೆಯನ್ನು ಸೃಜನೆ ಮಾಡಲಾಗಿದೆ. |
| ಆ) | ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಪುಸ್ತಕಗಳು ಖರೀದಿಯ ವಿವಿಧ ಯೋಜನೆಗಳಾವುವು? (1. ಏಕ ಗವಾಕ್ಷಿ 2. ಆರ್.ಆರ್.ಎಲ್.ಎಫ್ ಮತ್ತು 3. ಎಸ್.ಸಿ.ಪಿ. ಟಿ.ಎಸ್.ಪಿ. ಯೋಜನೆ) ಬಗ್ಗೆ ವಿವರ ನೀಡುವುದು. | **1) ಏಕ ಗವಾಕ್ಷಿ ಯೋಜನೆ:** ಸರ್ಕಾರದ ಪತ್ರ ಸಂಖ್ಯೆ: ಇಡಿ 41 ಎಲ್ ಐಬಿ 2006 ದಿನಾಂಕ: 10-05-2006 ರಲ್ಲಿ "ಏಕಗವಾಕ್ಷಿ ಪದ್ಧತಿಯ ಮೂಲಕ ಲೇಖಕ ಪ್ರಕಾಶಕರ ಗ್ರಂಥಗಳನ್ನು ಖರೀದಿಸಿ ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು, ಶಾಖಾ ಗ್ರಂಥಾಲಯಗಳು ಮತ್ತು ಇತರೆ ಗ್ರಂಥಾಲಯಗಳ ಸಾರ್ವಜನಿಕ ಓದುಗರಿಗೆ ಒದಗಿಸಲು ಕ್ರಮ ವಹಿಸಲಾಗುತ್ತಿದೆ.<br><br>**2)ಆರ್.ಆರ್.ಆರ್.ಎಲ್.ಎಫ್ ಯೋಜನೆ:**<br>ರಾಜಾರಾಮ್ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಯೋಜನೆಯಡಿ ಕೈಗೊಳ್ಳಲಾಗುವ ಕಾರ್ಯಕ್ರಮಗಳ ವಿವರ :<br><br>1973ರಲ್ಲಿ ಸ್ಥಾಪನೆಯಾದ ರಾಜಾ ರಾಮ್ ಮೋಹನ್ ರಾಯ್ ಪ್ರತಿಷ್ಠಾನ, ಭಾರತ ಸರ್ಕಾರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ದೇಶಾದ್ಯಂತ ಜನರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಸಾರ್ವಜನಿಕ ಗ್ರಂಥಾಲಯ ಚಳುವಳಿಗೆ ಒತ್ತಾಸೆ ನೀಡಿ ಅದನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಸಾಧಿಸುತ್ತಿದೆ. ಪ್ರತಿಷ್ಠಾನವು ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು, ಗ್ರಂಥಾಲಯ ಸೇವೆಯಲ್ಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ವಯಸ್ಕರ ಶಿಕ್ಷಣ ಹಾಗೂ ಇಂತಹ ಇತರ ಸಂಘ ಸಂಸ್ಥೆಗಳಿಗೆ ಸಮಪಾಲು ನಿಧಿ ಮತ್ತು ಹೊಂದಾಣಿಕೇತರ ನಿಧಿ ಯೋಜನೆ ಅಡಿಯಲ್ಲಿ ಅನುದಾನ ಒದಗಿಸುವ ಮೂಲಕ ತನ್ನ ಗುರಿಯನ್ನು ಸಾಧಿಸುತ್ತಿದೆ. |

| | | |
|---|---|---|
| | | ಕರ್ನಾಟಕ ರಾಜ್ಯದಲ್ಲಿ ಸರ್ಕಾರ 1973 ರಿಂದಲೂ ಪ್ರತಿಷ್ಠಾನದ ನೆರವಿನ ಯೋಜನೆಗಳಿಂದ ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ಪಡೆಯುತ್ತಿದೆ. ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಸ್ವಯಂ ಸೇವಾ ಸಂಸ್ಥೆಗಳೂ ಸಹ ಹೊಂದಾಣಿಕೇತರ ಯೋಜನೆ ಅಡಿ ಧನಸಹಾಯ ಪಡೆದು ಗ್ರಂಥಾಲಯಗಳಿಗೆ ಪುಸ್ತಕ, ಪೀಠೋಪಕರಣ, ಕಟ್ಟಡ ಮುಂತಾದವುಗಳಿಗೆ ಧನ ಸಹಾಯ ಪಡೆದಿವೆ.<br><br>**3)ಎಸ್.ಸಿ.ಪಿ / ಟಿ.ಎಸ್.ಪಿ. ಯೋಜನೆ :**<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ/ 122/ಯೋಯೋಕ/ 2007, ದಿನಾಂಕ: 04-04-2007 ರಲ್ಲಿ ಮುಂದುವರಿಕಾ ಕಾರ್ಯಕ್ರಮಗಳಲ್ಲಿನ ಹೊಸ ಕಾರ್ಯಕ್ರಮಗಳ ಮಂಜೂರಾತಿ ವಿವರದಲ್ಲಿ "ಕೊಳಚೆ ಪ್ರದೇಶಗಳಲ್ಲಿ ಗ್ರಂಥಾಲಯಗಳ ಸ್ಥಾಪನೆ" ಮತ್ತು ಅಲೆಮಾರಿ ಎಸ್.ಸಿ/ಎಸ್.ಟಿ ಜನಾಂಗದವರಿಗಾಗಿ ಗ್ರಂಥಾಲಯಗಳನ್ನು ಸ್ಥಾಪನೆ ಮಾಡಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.<br><br>ಅದರನ್ವಯ ರಾಜ್ಯದ ವಿವಿಧೆಡೆ 100 ಕೊಳಚೆ ಪ್ರದೇಶಗಳಲ್ಲಿ ಗ್ರಂಥಾಲಯವನ್ನು ತೆರೆಯಲಾಗಿದ್ದು, ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನತೆಗೆ ಗ್ರಂಥಾಲಯ ಸೌಲಭ್ಯ ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ. 127 ಅಲೆಮಾರಿ ಪ್ರದೇಶಗಳಲ್ಲಿ ವಾಸಿಸುವ ಜನತೆಗೆ ಉಪಯುಕ್ತವಾಗುವಂತೆ ಗ್ರಂಥಾಲಯಗಳನ್ನು ಪ್ರಾರಂಭಿಸಿ, ಅಲೆಮಾರಿ ಜನಾಂಗದವರಿಗೆ ಅವರ ನೆಲೆಯಲ್ಲಿ ಗ್ರಂಥಾಲಯಗಳನ್ನು ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ.<br><br>ರಾಜ್ಯದಲ್ಲಿನ ಎಲ್ಲಾ ಕೊಳಚೆ ಮತ್ತು ಅಲೆಮಾರಿ ಪ್ರದೇಶಗಳ ಗ್ರಂಥಾಲಯಗಳಿಗೆ ಕಟ್ಟಡ, ಮೂಲಭೂತ ಸೌಕರ್ಯಗಳು, ಪೀಠೋಪಕರಣ, ಪುಸ್ತಕಗಳನ್ನು ಒದಗಿಸಲು ಸಮಗ್ರ ಯೋಜನೆಯನ್ನು ರೂಪಿಸಲಾಗಿದೆ.<br><br>127 ಅಲೆಮಾರಿ, 100 ಕೊಳಚೆ ಪ್ರದೇಶ ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಠ ವೇತನವನ್ನು ಪಾವತಿಸುವ ಕುರಿತು ಸರ್ಕಾರದಿಂದ ಆದೇಶಿಸಲಾಗಿರುತ್ತದೆ. |

| | | |
|---|---|---|
| ಇ) | ಕನ್ನಡ ಪುಸ್ತಕಗಳ ಪುಟವಾರು ಬೆಲೆ ಏರಿಕೆ 2017 ರಿಂದ ಪರಿಷ್ಕರಣೆ ಆಗದೆ ವಿವಿಧ ಅಳತೆಯ ಪುಸ್ತಕಗಳ ಬೆಲೆ ನಿಗಧಿ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? | ಇಲಾಖೆಯಿಂದ ಖರೀದಿಸುವ ಪುಸ್ತಕಗಳಿಗೆ ಸರ್ಕಾರದ ಆದೇಶದಂತೆ ಪುಸ್ತಕಗಳ ಅಳತೆ ಮತ್ತು ಕಾಗದದ ಗುಣಮಟ್ಟದನ್ವಯ ಪುಟವಾರು ಬೆಲೆ ನಿಗದಿಪಡಿಸಿ ಖರೀದಿಸಲಾಗುತ್ತಿದ್ದು, ಸದರಿ ಬೆಲೆಯ ಮೇಲೆ ಪ್ರತಿ ಪುಟಕ್ಕೆ 30 ಪೈಸೆ ಹೆಚ್ಚಿಸಿ ಪರಿಷ್ಕರಿಸುವಂತೆ ಕೋರಿ ದಿನಾಂಕ 08.11.2024ರಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಈ) | ಸಾರ್ವಜನಿಕ ಗ್ರಂಥಾಲಯ ಕರ ಸಂದಾಯವಾಗದೆ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಿಂದ ಗ್ರಂಥಾಲಯ ಬಾಕಿ ಕರ ಎಷ್ಟಿದೆ? ವಸೂಲಿಗಾಗಿ ಕೈಗೊಂಡ ಕ್ರಮಗಳೇನು? ಪ್ರಸ್ತುತ ವರ್ಷ ಯಾವ ವರ್ಷದಲ್ಲಿ ಪ್ರಕಟವಾದ ಪುಸ್ತಕಗಳ ಆಯ್ಕೆ ನಡೆದಿದೆ? ಇದರಲ್ಲಿ ಆಯ್ಕೆ ಮತ್ತು ತಿರಸ್ಕೃತವಾದ ಪುಸ್ತಕಗಳಮ ಸಂಖ್ಯೆ ಎಷ್ಟು? (ವಿವರ ನೀಡುವುದು) | ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಬಿ.ಬಿ.ಎಂ.ಪಿ. ಮತ್ತು ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಂದ ದಿನಾಂಕ: 31-03-2024 ರ ಅಂತ್ಯಕ್ಕೆ ರೂ. 734.81 ಕೋಟಿ ಗ್ರಂಥಾಲಯ ಕರ ಬಾಕಿ ಇರುತ್ತದೆ.<br><br>ಬಾಕಿ ಇರುವ ಗ್ರಂಥಾಲಯ ಕರ ಪಾವತಿಸಲು ಕ್ರಮ ವಹಿಸುವಂತೆ ಬಿಬಿಎಂಪಿ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ ಪತ್ರ ವ್ಯವಹರಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 441 ಜಿಇಎಲ್ 2014, ಬೆಂಗಳೂರು, ದಿ: 16.03.2021 ರಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹವಾಗುವ ಸಾರ್ವಜನಿಕ ಗ್ರಂಥಾಲಯ ಕರವನ್ನು ಇತರೆ ಉದ್ದೇಶಗಳಿಗೆ ಬಳಸದೇ ಇರುವ ಸಲುವಾಗಿ, ಸದರಿ ಮೊತ್ತದ ಸಂಗ್ರಹ ಮತ್ತು ಜಮೆಗಾಗಿ ಪ್ರತ್ಯೇಕ ESCROW ಖಾತೆಯನ್ನು ತೆರೆಯಲು ಸೂಚಿಸಲಾದಂತೆ ರಾಜ್ಯಾದಂತ ಎಲ್ಲಾ ಸ್ಥಳೀಯ ಸಂಸ್ಥೆಗಳು ESCROW ಖಾತೆಯನ್ನು ತೆರೆಯಲಾಗಿರುತ್ತದೆ.<br><br>ಅಲ್ಲದೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಬೇಕಾದ ಬಾಕಿ ಇರುವ ಗ್ರಂಥಾಲಯ ಕರವನ್ನು ಪ್ರತಿ ವರ್ಷ ಶೇ.25 ರಂತೆ ಮುಂದಿನ ನಾಲ್ಕು ವರ್ಷಗಳಲ್ಲಿ ಅಂದರೆ, 2020-21, 2021-22, 2022-23 ಹಾಗೂ 2023-24 ಸಾಲಿನ ಆರ್ಥಿಕ ವರ್ಷಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಲು ಸೂಚಿಸಲಾಗಿರುತ್ತದೆ.<br><br>ಮುಂದುವರೆದು ನಿರ್ದಿಷ್ಟಪಡಿಸಲಾದ 30 ದಿನಗಳ ಒಳಗಾಗಿ ಸಂಗ್ರಹಿಸಲಾಗುವ ಗ್ರಂಥಾಲಯ ಉಪಕರವನ್ನು ಆಯಾ ಸ್ಥಳೀಯ ಸಂಸ್ಥೆಗಳು ಸಂಬಂಧಪಟ್ಟ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿಸುವಲ್ಲಿ ಪ್ರಸ್ತುತ ಆಗುತ್ತಿರುವ |

..6

| | | |
|---|---|---|
| | | ವಿಳಂಬವನ್ನು ತಪ್ಪಿಸುವ ನಿಟ್ಟಿನಲ್ಲಿ ಆರ್ಥಿಕ ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಮತ್ತು ಕಾನೂನು ಇಲಾಖೆಯ ಅಭಿಪ್ರಾಯದನ್ವಯ ಕರ್ನಾಟಕ ಗ್ರಂಥಾಲಯ ಇಲಾಖೆಯ ಕಾಯ್ದೆ 1965 ಕಲಂ 30ಕ್ಕೆ ತಿದ್ದುಪಡಿ ಉಪಬಂಧ ಕಲ್ಪಿಸಿ ಗ್ರಂಥಾಲಯ ಉಪಕರವನ್ನು ವಸೂಲಿ ಮಾಡಿದ 30 ದಿನಗಳೊಳಗೆ ಸಂಬಂಧಪಟ್ಟ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಪಾವತಿಸಲು ಅವಕಾಶ ಕಲ್ಪಿಸಲು ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಪರಿಶೀಲಿಸಲಾಗುತ್ತದೆ.<br><br>ಪ್ರಸ್ತುತ 2021 ರಲ್ಲಿ ಪ್ರಕಟಗೊಂಡ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಅಂತಿಮ ಹಂತದಲ್ಲಿರುತ್ತದೆ. |
| ಉ) | ಮೇಃ ಅಕ್ನಾ ಟೆಕ್ನಾಲಜಿ ಸಂಸ್ಥೆಯಿಂದ ಇಲಾಖೆಗೆ ಖರೀದಿಸಲಾಗಿರುವ ಗಣಕಯಂತ್ರ ಹಾಗೂ ಮತ್ತಿತರೆ ಎಲೆಕ್ಟ್ರಾನಿಕ್ ಉಪಕರಣಗಳಾವುವು? (ಜಿಲ್ಲಾವಾರು/ನಗರ<br>ವಾರು ಹಾಗೂ ಶಾಲಾ ಕಾಲೇಜುವಾರು ಮಾಹಿತಿ ಒದಗಿಸುವುದು | ಮೆ: ಅಕ್ನಾ ಟೆಕ್ನಾಲಜಿ ಸಂಸ್ಥೆಯಿಂದ ಇಲಾಖೆಗೆ ಖರೀದಿಸಲಾಗಿರುವ ಗಣಕಯಂತ್ರ ಹಾಗೂ ಮತ್ತಿತರೆ ಎಲೆಕ್ಟ್ರಾನಿಕ್ ಉಪಕರಣಗಳ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. |

**ಸಂಖ್ಯೆ: ಇಪಿ/ 187 /ಎಲ್ಐಬಿ/2024**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

## ಅನುಬಂಧ-1

| ಕ್ರ.ಸಂ. | ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಹೆಸರು | ಪರಿಕರಗಳ ವಿವರ |
|---|---|---|
| 1. | ಜಿಲ್ಲಾ ಕೇಂದ್ರ ಗ್ರಂಥಾಲಯ, ಮಡಿಕೇರಿ | ಬೆರಳಚ್ಚು ಹಾಜರಾತಿ ಯಂತ್ರ, ಯುಪಿಎಸ್ |
| 2. | ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಮಗಳೂರು | ಬಯೋಮೆಟ್ರಿಕ್ ಹಾಜರಾತಿ ಯಂತ್ರ |
| 3. | ಜಿಲ್ಲಾ ಕೇಂದ್ರ ಗ್ರಂಥಾಲಯ, ಹಾಸನ | ಬಯೋಮೆಟ್ರಿಕ್ ಹಾಜರಾತಿ ಯಂತ್ರ, |
| 4. | ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ | ಬಯೋಮೆಟ್ರಿಕ್ ಹಾಜರಾತಿ ಯಂತ್ರ, |
| 5. | ಜಿಲ್ಲಾ ಕೇಂದ್ರ ಗ್ರಂಥಾಲಯ,ಶಿವಮೊಗ್ಗ | ಬಯೋಮೆಟ್ರಿಕ್ ಹಾಜರಾತಿ ಯಂತ್ರ |
| 6. | ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಬಳ್ಳಾಪುರ | ಯುಪಿಎಸ್ |
| 7. | ಜಿಲ್ಲಾ ಕೇಂದ್ರ ಗ್ರಂಥಾಲಯ,ಮೈಸೂರು | ಯುಪಿಎಸ್-ಬ್ಯಾಟರಿ, ಗಣಕಯಂತ್ರ, ಪ್ರಿಂಟರ್, ಸಿಸಿಟಿವಿ |
| 8. | ನಿರ್ದೇಶಕರ ಕಛೇರಿ, ಬೆಂಗಳೂರು | ಗಣಕಯಂತ್ರ, ಆಲ್ ಇನ್ ಒನ್ ಪ್ರಿಂಟರ್ |
| 9. | ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಂಗಳೂರು | ಬಯೋಮೆಟ್ರಿಕ್, ಯುಪಿಎಸ್, ಜೆರಾಕ್ಸ್ ಯಂತ್ರ, ಸಿಸಿ ಟಿವಿ |
| 10. | ನಗರ ಕೇಂದ್ರ ಗ್ರಂಥಾಲಯ, ಮೈಸೂರು | ಯುಪಿಎಸ್-ಬ್ಯಾಟರಿ, ಗಣಕಯಂತ್ರ, ಜೆರಾಕ್ಸ್ ಯಂತ್ರ,, ಸಿಸಿಟಿವಿ |
| 11. | ನಗರ ಕೇಂದ್ರ ಗ್ರಂಥಾಲಯ,ಶಿವಮೊಗ್ಗ | ಬಯೋಮೆಟ್ರಿಕ್ ಯಂತ್ರ |
| 12. | ನಗರ ಕೇಂದ್ರ ಗ್ರಂಥಾಲಯ, ಕೆ.ಜಿ.ಎಫ್. | ಬಯೋಮೆಟ್ರಿಕ್ ಯಂತ್ರ |
| 13. | ನಗರ ಕೇಂದ್ರ ಗ್ರಂಥಾಲಯ, ಹೊಸಪೇಟೆ | ಗಣಕಯಂತ್ರ, ಬಯೋಮೆಟ್ರಿಕ್ ಯಂತ್ರ |
| 14. | ನಗರ ಕೇಂದ್ರ ಗ್ರಂಥಾಲಯ, ದಾವಣಗೆರೆ | ಬಯೋಮೆಟ್ರಿಕ್ ಯಂತ್ರ, ಸಿಸಿಟಿವಿ ಕ್ಯಾಮೆರಾ |
| 15. | ನಗರ ಕೇಂದ್ರ ಗ್ರಂಥಾಲಯ, ಚಿಕ್ಕಮಗಳೂರು | ಬಯೋಮೆಟ್ರಿಕ್ ಯಂತ್ರ |
| 16. | ನಗರ ಕೇಂದ್ರ ಗ್ರಂಥಾಲಯ, ಹಾಸನ | ಬಯೋಮೆಟ್ರಿಕ್ ಯಂತ್ರ |

| | | |
|---|---|---|
| 17. | ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಬೆಂಗಳೂರು | ಗಣಕಯಂತ್ರ, ಯುಪಿಎಸ್, ಸಿಸಿಟಿವಿ ಕ್ಯಾಮೆರಾ, ಜೆರಾಕ್ಸ್ ಯಂತ್ರ, ಬಯೋಮೆಟ್ರಿಕ್ ಯಂತ್ರ |
| 18. | ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು | ಗಣಕಯಂತ್ರ, ಯುಪಿಎಸ್, ಜೆರಾಕ್ಸ್ ಯಂತ್ರ, ಬಯೋಮೆಟ್ರಿಕ್ |
| 19. | ನಗರ ಕೇಂದ್ರ ಗ್ರಂಥಾಲಯ, ಪೂರ್ವ ವಲಯ, ಬೆಂಗಳೂರು | ಗಣಕಯಂತ್ರ, ಜೆರಾಕ್ಸ್ ಯಂತ್ರ, ಬೆರಳಚ್ಚು ಹಾಜರಾತಿ ಯಂತ್ರ, ಯುಪಿಎಸ್- ಬ್ಯಾಟರಿ, ಸಿಸಿಟಿವಿ ಕ್ಯಾಮೆರಾ |
| 20. | ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು | ಜೆರಾಕ್ಸ್ ಯಂತ್ರ, ಬೆರಳಚ್ಚು ಹಾಜರಾತಿ ಯಂತ್ರ, ಯುಪಿಎಸ್- ಬ್ಯಾಟರಿ, ಸಿಸಿಟಿವಿ ಕ್ಯಾಮೆರಾ, ಪ್ರಿಂಟರ್ |
| 21. | ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು | ಯುಪಿಎಸ್, ಜೆರಾಕ್ಸ್ ಯಂತ್ರ, ಬಯೋಮೆಟ್ರಿಕ್, ಗಣಯಂತ್ರ, ಪ್ರಿಂಟರ್, ಸಿಸಿಟಿವಿ |